೧ ನವೆಂಬರ್ ೧೯೫೬ ರಂದು ಶ್ರೀ ಪಂಪಾಕ್ಷೇತ್ರದಲ್ಲಿ ನವರಾಜ್ಯೋದಯದ ಉತ್ಸವ

ಕರ್ನಾಟಕ ಕುಲಪುರೋಹಿತರೆನಿಸಿದ ವಯೋವೃದ್ಧರಾದ ಶ್ರೀ ಆಲೂರ ವೆಂಕಟ ರಾಯರ ಪೌರೋಹಿತ್ಯದಲ್ಲಿ ಅಂದಿನ ಗುರು ಗಂಭೀರ ವಾತಾವರಣದಲ್ಲಿ ವೇದೋಕ್ತವಾಗಿ ಈ ರಾಜ್ಯೋದಯದ ಉತ್ಸವವು ಸಾಂಗವಾಯಿತು. ಕರ್ನಾಟಕದ ಬೇರೆಬೇರೆ ಭಾಗಗಳಿಂದ ಈ ಉತ್ಸವದಲ್ಲಿ ಭಾಗವಹಿಸಲು ಜನ ಬಂದಿದ್ದರು. ಹೀಗೆ ಬಂದ ಕನ್ನಡಿಗರು ತಮ್ಮತಮ್ಮ ಭಾಗದಲ್ಲಿ ನದಿಗಳ ನೀರನ್ನೂ ಆಯಾ ಭಾಗಗಳ ಕನ್ನಡ ತಾಯಿಯ ಮೈಮಣ್ಣನ್ನೂ ಹೂ ಹಣ್ಣುಗಳನ್ನೂ ಕಾಳಂಕಡಿಗಳನ್ನೂ ಉತ್ಸವಕ್ಕೆಂದು ತಂದು ಒಪ್ಪಿಸಿದ್ದರು.

ಅಲಂಕೃತ ವೇದಿಕೆಯ ಅಗ್ರಪೀಠದಲ್ಲಿ ತೀರ್ಥಕುಂಭ, ಅದರ ಹಿನ್ನೆಡೆಗೆ ಕಲ್ಪಿತ ವಿಶ್ವ ಪತಾಕೆ. ಅದರ ಮುಂದೆ ಭಾರತದ ಪತಾಕೆ, ಅದರ ಮುಂದೆ ಸಮ್ಮುಖವಾಗಿ ಇರಿಸಿದ ನವ ಕರ್ನಾಟಕದ ಬಾವುಟ. ಇದನ್ನೆಲ್ಲ ಸಿಂಗರಿಸಲು ಬೇರೆಬೇರೆ ಭಾಗಗಳಿಂದ ಬಂದ ತೆಂಗು. ಕಂಗು, ಕೆದಾಳೆ, ಸೀಯಾಳ, ಹಸಿ ಅಡಿಕೆ. ತೋರಕಿತ್ತಳೆ—ಸಿಂಗಾರೆ ಎಂಬ ಪುಷ್ಪಗಳಿದ್ದವು.

ಹೀಗಿರಲು ಸಂಜೆ 7 ಕ್ಕೆ ಮೊಟ್ಟಮೊದಲು ಶ್ರೀ ಆಲೂರ ವೆಂಕಟರಾಯರ ಯಾಜಮಾನ್ಯದಲ್ಲಿ, ಶ್ರೀ ಭುವನೇಶ್ವರಿ ಸಹಸ್ರನಾಮ ಸಹಿತ ಕುಂಕುಮಪೂಜೆ, ಮಂಗಳಾರತಿ ಇತ್ಯಾದಿ ನಡೆದವು. ಅಲ್ಲಿಂದ ವಿದ್ಯಾರಣ್ಯ ಸನ್ನಿಧಿಯಲ್ಲಿ ಮಂಗಳಾರತಿಯಾಗಿ, ಪಂಪಾಪತಿಯ ಅರ್ಜನೆ ಮುಗಿಸಿಕೊಂಡು, ತೀರ್ಥಪ್ರಸಾದ ವಿತರಣೆಯ ನಂತರ ದಿವ್ಯವೂ ಭವ್ಯವೂ ಸುಂದರವೂ ವಿಶಾಲವೂ ಪ್ರಾಚೀನಶಿಲ್ಪದಿಂದ ವರ್ಣಚಿತ್ರಗಳಿಂದ ಕಲಾಪೂರ್ಣವೂ ಆದ ಕಲ್ಯಾಣಮಂಟಪದಲ್ಲಿ ರಾತ್ರಿ 9ರ ವರೆಗೆ ನಾಡಹಾಡುಗಳೊಂದಿಗೆ ಸಭೆ ನಡೆಯಿತು. ಬಾದಾಮಿ ಮತ್ತು ಗುಡಿ ಎಂಬ ಇಬ್ಬರು ಚಿಕ್ಕ ಕುಮಾರಿಕೆಯರು ಕರ್ನಾಟಕದ ಸ್ತ್ರೀಲೋಕವನ್ನು ಪ್ರತಿನಿಧಿಸಿ ಬಂದಿದ್ದರೋ ಎಂಬಂತೆ ಗದಗಿನಿಂದ ನಾಡಹಬ್ಬಗಳನ್ನು ಹಾಡಲು ಬಂದಿದ್ದರು. ಅವರ ಮಧುರ ರಾಷ್ಟ್ರಗೀತೆಯ ನಂತರ ಸಭೆ ಪ್ರಾರಂಭವಾಯಿತು.

ಶತಾಸುಶತಕಗಳ ಉದ್ದಕ್ಕೂ ಅನೇಕ ಮಹಾವಿಭೂತಿಗಳೂ ಕವಿಗಳೂ ಶಿಲ್ಪಿಗಳೂ ರಾಜ್ಯದರಂಧರರೂ ವೀರರೂ ರಾಜಕಾರಣ ಪಟುಗಳೂ ಕೂಡಿ ಕನ್ನಡನಾಡಿನ ಸಾಹಿತ್ಯಕ, ಕಲಾತ್ಮಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ವೈಭವವನ್ನು ಬೆಳೆಯಿಸಿ ವೈಶಿಷ್ಟ್ಯಪೂರ್ಣವಾದ ಭದ್ರವಾದ ಸತ್ಪರಂಪರೆಯೊಂದನ್ನು ಕಟ್ಟಿ ನಿಲ್ಲಿಸಿದ್ದಾರೆ. ಈ ಮಹತ್ಕಾರ್ಯಕ್ಕೆ ಕಾರಣಭೂತರಾದವರೆಲ್ಲರನ್ನೂ ಅತ್ಯಾಧುನಿಕ ಕಾಲದವರೆಗೂ ಸ್ಮರಿಸಿ ಅವರೆಲ್ಲರಿಗೂ ಇಂದಿನ ಕರ್ನಾಟಕದ ಕೃತಜ್ಞತೆ ಸಲ್ಲಿಸುವುದೇ ಈ ಸಭೆಯ ಆಶಯವಾಗಿತ್ತು. ಮೊಟ್ಟಮೊದಲು

ಶ್ರೀ ದೊಡ್ಡಮೇಟಿ ಅಂದಾನಪ್ಪನವರು ಪ್ರಾಥಮಿಕ ಭಾಷಣ ಮಾಡಿ, ಬಿಕ್ಕಟ್ಟಿನ ಪ್ರಸಂಗಗಳಲ್ಲೆಲ್ಲ ತಾವು ಶ್ರೀ ಭುವನೇಶ್ವರಿಯ ಸನ್ನಿಧಿಗೆ ಧಾವಿಸಿಬಂದು, ಆಕೆಗೆ ಮೊರೆಹೊಕ್ಕ ವಿಚಾರ ಹೇಳಿದರು. ಇದೇ ಬಗೆಯಾಗಿ ಶ್ರೀ ನರೆಗಲ್ಲ ಪ್ರಹ್ಲಾದರಾಯರು ಕರ್ನಾಟಕದ ವೀರವಿಭೂತಿಗಳ ವಿಷಯಕ್ಕೂ ಶ್ರೀ ಮೈಂದೂರ ತಿರುಮಲಾಚಾರ್ಯರು ಕನ್ನಡದ ಕವಿಗಳ ವಿಷಯಕ್ಕೂ, ಶ್ರೀ ನಾರಾಯಣ ಸಂಗಮರವರು ಕರ್ನಾಟಕದ ಶಿಲ್ಪಿಗಳು, ಕಲಾವಿದರು, ಸಂಗೀತಜ್ಞರ ವಿಷಯಕ್ಕೂ ಶ್ರೀ ಗಾಂವಕರರು ಆಧುನಿಕ ಕರ್ನಾಟಕ ಏಕೀಕರಣ ಭಕ್ತರು ಹಾಗೂ ಧುರೀಣರ ವಿಷಯಕ್ಕೂ ಸಮಯೋಚಿತ ಭಾಷಣ ಮಾಡಿದರು.

ಕೂಡಿದ ಜನರಲ್ಲಿ ಏಕೀಕರಣವು ಸಾಂಕೇತಿಕವಾಗಿ ವ್ಯಕ್ತವಾಗಿದ್ದಂತೆ ಊಟದಲ್ಲಿಯೂ ಏಕೀಕರಣ ವೈಶಿಷ್ಟ್ಯವು ಒಡೆದು ಕಾಣುತ್ತಿತ್ತು. ಪಂಪಾಧೀಶ್ವರನ ಪ್ರಾಕಾರದಲ್ಲಿ ವಿಸ್ತೀರ್ಣವಾದ ಹಾಸೋಗಲ್ಲಿನ ಸ್ವಚ್ಛ ಪಟಾಂಗಣದಲ್ಲಿ ಏಕೀಕರಣ ಭಕ್ತರು ಊಟಕ್ಕೆ ಕುಳಿತ ಆ ನೋಟವು ನಿಂತುನೋಡುವಂತಿತ್ತು. ಬೆಳನಲದ ಊಟವೆಂದು ನೂರಾರು ಬಿಳಿ ಜೋಳದ ರೊಟ್ಟಿ, ಕಾಳು, ಹಿಂಡಿ, ಬೆಣ್ಣೆ, ಕಲಸನ್ನ, ಕರ್ಜಿಕಾಯಿ ಇತ್ಯಾದಿ ಪದಾರ್ಥಗಳನ್ನು ಕೆಲವರು ತಂದಿದ್ದರು. ಮಲೆನಾಡಿನ ಊಟವೆಂದು ಅಕ್ಕಿಯ ಬಿಸಿಬೋನ, ಸಾರು, ಹುಳಿ, ಚಟ್ನಿ ಇತ್ಯಾದಿ ಖಾದ್ಯದ್ರವ್ಯಗಳೂ ಇದ್ದವು. ಪಂಕ್ತಿಗೆ ಕುಳಿತಾಗ ತಿನಿಸುಗಳನ್ನು ಪರಸ್ಪರರಲ್ಲಿ ವಿನಿಮಯಿಸಿ ಊಟಮಾಡುವಂತೆ ತಂದ ಬುತ್ತಿಯನ್ನು ಕೆಲವರು ಎಲ್ಲರಿಗೂ ಬಡಿಸುವ ಸಂಭ್ರಮವೇನು ! ಊಟಕ್ಕೆ ಕುಳಿತ ಜನರಲ್ಲಿ ಯಾರ ಕಲ್ಪನೆಯೂ ಇಲ್ಲದಹಾಗೆ ತಾನಾಗಿ ಒಡಮೂಡಿ ಹೋಗಿದ್ದ ಜಾತ್ಯತೀತ ಸಮ್ಮಿಲನವನ್ನು ಚಿಕಿತ್ಸಾದೃಷ್ಟಿಯಿಂದ ಈಗ ನೆನಸಿಕೊಂಡಾಗಲೇ ಅದರ ಅರಿವು !

ರಾತ್ರಿ 10-30 ಕ್ಕೆ ಸರಿಯಾಗಿ ಮತ್ತೆ ಕಲ್ಯಾಣಮಂಟಪಕ್ಕೆ ಬರಲು ಅಂದಿನ ಸಭೆಯ ಎರಡನೆಯ ಹಂತ ಪ್ರಾರಂಭವಾಯಿತು.

ಆಗ ಮೊದಲು ಎಲ್ಲ ತೀರ್ಥಗಳನ್ನೂ ನದಿನೀರನ್ನೂ ಹೆಸರು ಹೇಳಿ ಹೇಳಿ ಕುಂಭಕ್ಕೆ ಸುರಿಯಲಾಯಿತು. ಮಾದರಿಗಾಗಿ ಕೆಲವು ತೀರ್ಥಗಳ ಹೆಸರನ್ನು ಇಲ್ಲಿ ನಿರ್ದೇಶಿಸಿದೆ : ಗೋಕರ್ಣದಿಂದ ಬಂದವರು ಕೋಟಿತೀರ್ಥ, ರಾಮತೀರ್ಥ, ನಾಗತೀರ್ಥ, ಪಾಪನಾಶಿನೀ ತೀರ್ಥ, ಋಣ ವಿಮೋಚನತೀರ್ಥ, ಕಮಂಡಲತೀರ್ಥ, ಗೌತಮತೀರ್ಥ ಮೊದಲಾದವನ್ನು ತಂದಿದ್ದರು. ಅಲ್ಲದೆ ಅವರು ಗಂಗಾವಳಿ ನದಿ, ಅಘನಾಶಿನೀ ನದಿ, ಶರಾವತಿ ನದಿ, ವೆಂಕಟಾಪುರ ನದಿ, ಕಾಳೀ ನದಿ, ಪಾಂಡರೀ ನದಿ ನೀರುಗಳನ್ನೂ, ''ರತ್ನಾಕರಿ''ಯನ್ನೂ ಅಂದರೆ ಸಮುದ್ರೋದಕವನ್ನು ತಂದಿದ್ದರು. ಶ್ರೀ ವಾಸುದೇವ ಶಿಗ್ಗಾಂವ ಮೊದಲಾದವರು ಧರ್ಮಾ ನದಿಯ ನೀರನ್ನು ಹಾನಗಲ್ಲಲ್ಲಿ ಮೆರವಣಿಗೆಯಲ್ಲಿ ತಂದು, ಅಲ್ಲಿ ತಾರೇಶ್ವರನಿಗೆ ಅಭಿಷೇಕ ಮಾಡಿ ಆ ನೀರನ್ನು ಕಳುಹಿಸಿದ್ದರು, ರಾಣೆಬೆನ್ನೂರಿನ ಒಬ್ಬ ಮಿತ್ರರು ಕುಮುದ್ವತಿ ತೀರ್ಥ ತಂದಿದ್ದರು. ಮಂಡಿಯಾಳದ ಗೆಳೆಯರು ಕಾವೇರಿ ಜಲ ತಂದಿದ್ದರು. ರಾಯಚೂರವರು

ಉತ್ತರ ಕರ್ನಾಟಕದ ಎಲ್ಲ ಹೊಳೆಗಳು ಕೂಡಿದ, ಕೃಷ್ಣಾ ನದಿಯು ಸಂಗಮಸ್ಥಳದಿಂದ ಉದಕ ತಂದಿದ್ದರು. ಇವಲ್ಲದೆ ತುಂಗಾ, ಭದ್ರಾ, ಭೀಮಾ, ವರದಾ, ಮಲಪ್ರಭ, ಘಟಪ್ರಭ ಇತ್ಯಾದಿ ನದೀ ನೀರು ಬಂದಿತು.

ಸರಿರಾತ್ರಿವರೆಗೂ ಶ್ರೀ ಕೆ. ಎಫ್. ಪಾಟೀಲರ, ಶ್ರೀ ಮಂಗಲಗೀಯವರ, ರಾಯಚೂರಿನ ಶ್ರೀ ಶ್ರೀಕಂಠಯ್ಯನವರ, ಆಗುಂಬೆಯ ಶ್ರೀ ವಿಜಯೇಂದ್ರರಾಯರ, ಋಷ್ಯಮೂಕಾಶ್ರಮದ ಶ್ರೀವಿಜಯೇಂದ್ರ ಯೋಗಿಗಳ, ಶ್ರೀ ಬುರ್ಲಿ ಶೇಷಣ್ಣನವರ ಚಿಕ್ಕಚಿಕ್ಕ ಭಾಷಣಗಳಾದವು. ಸಮಗ್ರ ಕಾರ್ಯಕ್ರಮದುದ್ದಕ್ಕೂ ಸರದಾರರಂತೆ ಸೂತ್ರಧಾರನ ಹಾಗೆ ವಿಪರಣೆಯ ರೂಪದಿಂದಲೂ ಸಭಾಚಾಲನೆಯ ವ್ಯಾಜದಿಂದಲೂ, ಶ್ರೀ ಕೃಷ್ಣಕುಮಾರರ ಪಾತ್ರ ನಡುನಡುವೆ ಬಂದೇ ಬರುತಿತ್ತು. ಈ ಸಮಯದಲ್ಲಿ ಶ್ರೀ ಕೃಷ್ಣಕುಮಾರರು ಶ್ರೀ ಆಲೂರ ರವರಿಂದ ಈಗಾಗಲೇ ಪ್ರಕಟಿಸಲ್ಪಟ್ಟ " ಕರ್ನಾಟಕ ಏಕೀಕರಣದ ಸೂತ್ರಗಳು " ಎಂಬ ಚಿಕ್ಕ ಹೊತ್ತಿಗೆಯಿಂದ ಕೆಲವೊಂದು ಸಾರಗರ್ಭಿತವಾದ ಸೂತ್ರಗಳನ್ನು ಓದಿ ಹೇಳಿದರು. ಅನಂತರ ಅನೇಕರಿಂದ ಸಂಗೀತ ಸೇವೆ ನಡೆಯಿತು.

ರಾಜ್ಯೋದಯದ ಪರ್ವಕಾಲದ ಸಮಯಕ್ಕೆ, ಅಂದರೆ ನಟ್ಟಿರುಳಾಗುತ್ತಲೇ ಶ್ರೀ ಪಂಪಾಪತಿಯ ಘಂಟಾರವದ ಎತ್ತುಗಡೆಯಿತ್ತು. ಮಧ್ಯೆಮಧ್ಯೆ ರವೀಂದ್ರನೆಂಬ ಎಳೆಹರೆಯದ ಹುಡುಗನೊಬ್ಬನು ಅಣುಕ್ಷೋಭೆಮಾಡಿಮಾಡಿ ತನ್ನ ಉತ್ಸಾಹವು ಪ್ರಸ್ತರ ಪ್ರಾಕಾರದಲ್ಲೆಲ್ಲ ಹಬ್ಬಿ ಪ್ರತಿಧ್ವನಿಸುವಂತೆ ಮಾಡುತ್ತಿದ್ದನು.

ಮಧ್ಯರಾತ್ರಿಯ ಘಂಟಾರವವಾಗುತ್ತಲೇ ಎಲ್ಲರೂ ಪಂಪಾನಾಥನ, ಇದಕ್ಕೆಂದೇನೆರ್ಪಟ್ಟ ವಿಶೇಷ ಅರ್ಚನೆಗೆಂದು ಹೊರಟರು. ಅರ್ಚನೆ, ಮಂಗಳಾರತಿ, ತೀರ್ಥಪ್ರಸಾದ ವಿತರಣೆಯಾಗುತ್ತಲೇ ಮತ್ತೆ ಜನರು ಮೂಲ ಸಭಾಮಂಟಪಕ್ಕೆ ಬಂದು ಕುಳಿತರು. ಆಗ ಅಲ್ಲಿ ಶ್ರೀ ವೆಂಕಟರಾಯರು ಪೌರೋಹಿತ್ಯವಹಿಸಿ ನವಕರ್ನಾಟಕದ ಭೂಪಟಕ್ಕೆ ಮತ್ತು ಮಂಗಲಕುಂಭಕ್ಕೆ ತಾವೇ ಯೋಜಿಸಿದ ವೇದೋಕ್ತವಾದ ವಿಶೇಷ ಪೂಜಾಕ್ರಮದಿಂದ ಪೂಜೆ, ಮಂಗಳಾಷ್ಟಕ, ಸ್ವಸ್ತಿಪಾಠ ಮೊದಲಾದ್ದು ಹೇಳಿ ಅರ್ಚನೆಮಾಡಿದರು. ನಂತರ ಗದ್ಗದ ಕಂಠಿತರಾಗಿ ಸಮಯೋಚಿತ ನಾಲ್ಕುಮಾತು ಹೇಳಿದರು.

ಹೀಗೆ ರಾತ್ರಿ ಒಂದು ಗಂಟೆಯಹೊತ್ತಿಗೆ ಮತ್ತೆ ಶ್ರೀ ಪಂಪಾಪತಿಯು ಮಂಗಳಾರತಿಗೆ ಕರೆ ಬಂದಿತು. ತರುವಾಯ ಪಾರ್ವತಿ, ಪರಮೇಶ್ವರರ ಏಕಾಂತಸೇವೆ, ಪರಾಕು ಇತ್ಯಾದಿ ನಡೆದುವು. ವಿಶ್ರಾಂತಿಗೆ ಹೊರಡುವಾಗ ರಾತ್ರಿ ಎರಡು ಗಂಟೆಯಾಯಿತು.

ಗುರುವಾರ ತಾರೀಖು 1 ರಂದು ಬೆಳಗ್ಗೆ 6-30ಕ್ಕೆ ಎಲ್ಲರೂ ಎದ್ದು ಪ್ರಾತರ್ವಿಧಿ ತೀರಿಸಿ ತುಂಗಭದ್ರೆಯಲ್ಲಿ ಮಿಂದು ದೇವರ ದರ್ಶನಪಡೆದ ತೀರ್ಥಕುಂಭವನ್ನು ತೆಗೆದು ಕೊಂಡು ಮಾನವಮಿ ದಿಬ್ಬಕ್ಕೆ ಹೋಗಿ ಅಲ್ಲಿ ಶ್ರೀ ಗಾಂವಕರರ ಹಸ್ತದಿಂದ ಭಾರತದ ಹಾಗೂ

ನವಕರ್ನಾಟಕದ ಧ್ವಜಾರೋಹಣ ಮತ್ತು ಧ್ವಜಪೂಜೆ, ಧ್ವಜವಂದನ ನಡೆಯಿತು. ಈ ಕಾರ್ಯಕ್ರಮಕ್ಕೆ ಕಮಲಾಪುರ, ಕಂಪಿಲಗಳಿಂದ ಕೆಲವರು ಬಂದು ಕೂಡಿಕೊಂಡಿದ್ದರು. ಈ ಸಂದರ್ಭದಲ್ಲಿ ಮುಕ್ತಾಯದ ಭಾಷಣಮಾಡುತ್ತ ಶ್ರೀ ಕೃಷ್ಣಕುಮಾರರು ತೆಗೆದ ಉದ್ಗಾರಗಳು ಕನ್ನಡನಾಡಿನ ಆಡಳಿತಗಾರರಿಗೆ ಸ್ಪಷ್ಟ ರಚನಾತ್ಮಕ ಸೂಚನೆಗಳಂತಿದ್ದವು.

ಮುಂದೆ ಎರಡೂ ಧ್ವಜಗಳನ್ನು ಕಮಲಾಪುರದವರೆಗೆ ಹೋಗಿ ಮೆರವಣಿಗೆಯಲ್ಲಿ ತೆಗೆದುಕೊಂಡು ಅಲ್ಲಿ ಕಾರ್ಯಕ್ರಮವು ಮುಕ್ತಾಯಗೊಂಡಿತು. ಅತ್ತ ಬೆಂಗಳೂರಲ್ಲಿ ರಾಜೋಚಿತವಾದ ವೈಭವದಿಂದ ರಾಜ್ಯೋದಯದ ಉತ್ಸವ ನಡೆದಾಗ ಇತ್ತ ಹಂಪೆಯಲ್ಲಿ ''ಪತ್ರಪುಷ್ಪಂ ಫಲಂ ತೋಯಂ'' ಸ್ವರೂಪದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಉತ್ಸವವು ಒಂದು ಮಹಾವ್ರತದಂತೆ ಜರುಗಿತು. ಒಂದುವೇಳೆ ಜರುಗಿರದಿದ್ದರೆ ಏನೋ ಒಂದು ಕೊರತೆಯಾಗಿ ಉಳಿಯಬಹುದಿತ್ತು. ಕೆಲವು ಜನ ಕನ್ನಡ ತಾಯಿಯ ಪ್ರಾತಿನಿಧಿಕ ಪುತ್ರ ಪುತ್ರಿಯರು ಈ ವ್ರತವನ್ನು ನಡೆಯಿಸಿ, ಈ ಕೊರತೆಯನ್ನು ತುಂಬಿ ತೆಗೆದಿದ್ದಾರೆ ಎಂದರೆ ಅದೇನೂ ಅತಿಶಯೋಕ್ತಿಯಲ್ಲ.

—ಉದ್ಧೃತ